ಟಿ.ಎಂ. ವಿಜಯ್ ಭಾಸ್ಕರ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
T.M. VIJAY BHASKAR, I.A.S.,
Chief Secretary

ಕರ್ನಾಟಕ ಸರ್ಕಾರ
Government of Karnataka

ಸಂಖ್ಯೆ:ಸಿಆಸುಇ 02 ಇಎಸ್‌ಪಿ 2020 ದಿನಾಂಕ:09.03.2020.

ಆದ್ಯ ಗಮನಕ್ಕೆ

## ಟಿಪ್ಪಣಿ

ವಿಷಯ: ಇಲಾಖೆಯಲ್ಲಿ ಮಾಹೆವಾರು ಕೈಗೊಂಡ ಚಟುವಟಿಕೆಗಳ ಕಾರ್ಯನಿರ್ವಹಣಾ ವರದಿಯನ್ನು ಹಾಗು ಮಾಸಿಕ ಪ್ರವಾಸದ ದಿನಚರಿಯನ್ನು ಇ-ಆಫೀಸ್ ಮೂಲಕ ಮಾತ್ರ ಕಳುಹಿಸುವ ಬಗ್ಗೆ.

***

1. ಕೆಲವು ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ತಮ್ಮ ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಮಾಹೆವಾರು ಸರ್ಕಾರಿ ಕಾರ್ಯಕ್ರಮಗಳ ಸಾಧನೆ ಹಾಗೂ ಕಾರ್ಯಚಟುವಟಿಕೆಗಳ ವರದಿಗಳನ್ನು ಕಾಗದ ರೂಪದಲ್ಲಿ ಕಳುಹಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ರೀತಿ ಮಾಹೆವಾರು ಇಲಾಖೆಯಲ್ಲಿ ನಡೆದಿರುವ ಸಾಧನೆ ಹಾಗೂ ನಿಯಮಿತ (regular) ಕಾರ್ಯಚಟುವಟಿಕೆಗಳ ಬಗ್ಗೆ ವರದಿಯನ್ನು ಇ-ಆಫೀಸ್ ಮೂಲಕ ಮಾತ್ರ ಸಲ್ಲಿಸಲು ಕೋರಿದೆ.

2. ಇಲಾಖಾ ಮುಖ್ಯಸ್ಥರು (ಆಯುಕ್ತರು, ನಿರ್ದೇಶಕರು, ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇತ್ಯಾದಿ) ಪ್ರತಿ ಮಾಹೆಯ ಸರ್ಕಾರಿ ಕಾರ್ಯಸಾಧನೆ ಹಾಗೂ ಕಾರ್ಯಚಟುವಟಿಕೆಗಳ ಬಗ್ಗೆ ವರದಿಯನ್ನು ಪ್ರತ್ಯೇಕವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) / ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಕಳುಹಿಸುವ ಅವಶ್ಯಕತೆ ಇರುವುದಿಲ್ಲ. ಇದನ್ನು ಸಂಬಂಧಪಟ್ಟ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರಿಗೆ ಮಾತ್ರ ಇ-ಆಫೀಸ್ ಮೂಲಕ ಮಾತ್ರ ಸಲ್ಲಿಸತಕ್ಕದ್ದು.

3. ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ತಮ್ಮ ಮಾಸಿಕ ಪ್ರವಾಸದ ದಿನಚರಿಯನ್ನು ಇ-ಆಫೀಸ್ ಮೂಲಕ ಮಾತ್ರ ಕಳುಹಿಸಲು ಕೋರಿದೆ.

(ಟಿ.ಎಂ. ವಿಜಯ್ ಭಾಸ್ಕರ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಇವರಿಗೆ:

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು (ತಮ್ಮ ಅಧೀನ ಕಾರ್ಯವ್ಯಾಪ್ತಿಗೆ ಒಳಪಡುವ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ತಮ್ಮ ಮುಖಾಂತರ ಸೂಚನೆ ನೀಡುವುದು).
2. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
3. ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

# 320, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು - 560 001, ದೂರವಾಣಿ ಕಛೇರಿ: +91-80-22252442 / 22253716 ಫ್ಯಾಕ್ಸ್: +91-80-22258913
# 320, 3rd Floor, Vidhana Soudha, Bengaluru - 560 001, Phone. off. +91-80-22252442 / 22253716 Fax: +91-80-22258913
e-mail : cs@karnataka.gov.in